ANUBHAVS



# ಶ್ರೀ ಅನಿರುದ್ಧ ವಿಜಯತೇ

© Copyright 2010, Manasamarthyadata.com



***- ಡಾ. ಶಿರೀಷ್ ದಾತಾರ್ (ಎಂ.ಡಿ) ಬಾಲರೋಗ ವಿಶೇಷಜ್ಞ*** (ಪೆಡಿಯಟ್ರಿಶನ್)

(ಡಾ. ಶಿರೀಷ್ ದಾತಾರ್ ಒಬ್ಬ ಪ್ರಖ್ಯಾತ ಬಾಲರೋಗತಜ್ಞರಾಗಿದ್ದು, ಇವರು ಪ.ಪೂ.ಬಾಪೂ (ಡಾ. ಶ್ರೀ ಅನಿರುದ್ಧ ಜೋಶಿ)ರವರ ಸಹಪಾಠಿಯಾಗಿದ್ದರು. ಈತ ತಮ್ಮ ಎಂ.ಬಿ.ಬಿ.ಎಸ್.ನಿಂದ ಎಂ.ಡಿಯ ವರೆಗಿನ ಅಧ್ಯಯನ ಯಾತ್ರೆಯನ್ನು ಬಾಪೂರವರ ಜೊತೆಗೇ ಕ್ರಮಿಸಿದ್ದಾರಿ. ಇವರು ಇಲ್ಲಿ ತಮ್ಮ ಒಂದು ಭಾವಸ್ಪರ್ಶಿ ಮರಿತ್ಯವನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದಾರೆ.)

1973ರಿಂದ ನನಗೆ ಡಾ. ಅನಿರುದ್ಧ ಜೋಶಿಯವರ ಪರಿಚಯವಿದೆ. ಮೆಡಿಕಲ್ ಕಾಲೇಜಿನ ಮೊದಲನೇ ವರ್ಷದಿಂದ ಇಂದಿನವರೆಗೆ ಡಾ. ಅನಿರುದ್ಧ ಜೋಶಿ (ಬಾಪೂ)ಯವರು ಒಂದು ಒಳ್ಳೆಯ ಮಿತ್ರ ಹಾಗೂ ಮಾರ್ಗದರ್ಶಕರ ರೂಪದಲ್ಲಿ ನನ್ನೊಂದಿಗಿದ್ದಾರೆ. ಕಳೆದ 25 ವರ್ಷಗಳಿಂದ ಅವರಿಂದ ನಾನು ಪಡೆದ ಸಲಹೆಗಳು ಹಾಗೂ ಮಾಗದರ್ಶನಗಳು ನನಗೆ ತುಂಬಾ ಉಪಕಾರಿಯಾಗಿದೆ.

ಕಾಲೇಜಿನ ಆರಂಭದ ದಿನಗಳಲ್ಲಿ ನಮ್ಮ ಪರಿಚಯವಾಯಿತು. ಆ ದಿನಗಳಲ್ಲಿ ನಾನು ಪೂರ್ಣತಃ ನಾಸ್ತಿಕನಾಗಿದ್ದೆನು. ದೇವರು, ಪೂಜೆ, ಸಾಧನೆ, ಉಪಾಸನೆ ಮುಂತಾದವುಗಳನ್ನು ಕಟುವಾಗಿ ವಿರೋಧಿಸುತ್ತಿದ್ದೆನು. ನನ್ನನ್ನು ಆ ಸ್ಥಿತಿಯಿಂದ ತೆಗೆದು ಉಪಾಸನೆಯ ಮಾರ್ಗಕ್ಕೆ ಕರೆತಂದವರು ಶ್ರೀ ಅನಿರುದ್ಧರೇ. ಅವರ ಕೃಪೆಯಿಂದಲೇ ಇಂದು ನಾವು ವಾಸಿಸುತ್ತಿರುವ ಕರ್ಜತ್‌ನ ಪರಿಸರದಲ್ಲಿ ಶ್ರೀ ಸಾಯಿನಾಥರ ಮತ್ತು ಶ್ರೀ ಸ್ವಾಮಿ ಸಮರ್ಥ (18ನೇ ಶತಮಾನದಲ್ಲಿ ಮಹಾರಾಷ್ಟ್ರದ ಅಕ್ಕಲಕೋಟ್ ಎಂಬ ಪ್ರದೇಶದಲ್ಲಿ ಪ್ರಕಟವಾದ ಶ್ರೀ ದತ್ತ ಗುರುವಿನ ಅವತಾರ)ರ ಸಾಮೂಹಿಕ ಉಪಾಸನೆಯನ್ನು ಆರಂಭಿಸಿದೆನು. ಸುಮಾರು ಎರಡೂವರೆ ವರ್ಷಗಳ ಹಿಂದೆ ಅವರು ನನಗೆ ಶ್ರೀ ಅಕ್ಕಲಕೋಟ್ ಮಹಾರಾಜರ ಚರಿತ್ರೆಯಾದ ‘‘ಶ್ರೀ ಗುರುಲೀಲಾಮೃತ’’ವನ್ನು ಓದುವ ಸಲಹೆಯನ್ನು ಕೊಟ್ಟಿದ್ದರು. ಅವರ ಮಾತಿನಂತೆ ಅದನ್ನು ಓದಲು ಆರಂಭಿಸಿದ ನಂತರ ನನ್ನಲ್ಲಿ ತುಂಬಾ ಬದಲಾವಣೆಗಳು ಕಂಡುಬಂದವು ಹಾಗೂ ಜೀವನದಲ್ಲಿ ಒಳ್ಳೊಳ್ಳೆಯ ಅನುಭವಗಳು ದೊರಕಿದುವು.

ನಾವು ಹೊಸ ಕಾರು ಕೊಂಡ ಸಮಯದಲ್ಲಿ ಕೂಡಲೇ ನಮಗೆ ಯಾವುದೇ ತೀರ್ಥ ಸ್ಥಳಕ್ಕೆ ಹೋಗುವುದು ಸಾಧ್ಯವಾಗಲಿಲ್ಲ. ಆಗ ಶ್ರೀ ಅನಿರುದ್ಧರೇ ಒತ್ತಾಯಪೂರ್ವಕವಾಗಿ ನಮ್ಮ ಕಾರಿನಲ್ಲಿ ಶ್ರೀ ಸ್ವಾಮಿ ಸಮರ್ಥ ಮಹಾರಾಜರ ಒಂದು ಚಿತ್ರ ಹಚ್ಚಿಡಲು ಹೇಳಿದರು ಹಾಗೂ ನಾವದನ್ನು ಶೀಘ್ರವೇ ಹಚ್ಚಿದ್ದೆವು. ಇದಾದ ಕೆಲವೇ ದಿನಗಳ ಬಳಿಕ ನಾವು ನಮ್ಮ ಕಾರಿನಲ್ಲಿ ಪ್ರಯಾಣಿಸುತ್ತಿರುವಾಗ ಮುಂದಿನಿಂದ ಬರುತ್ತಿದ್ದ ಮಾರುತಿ ಕಾರೊಂದು ನಮ್ಮ ಕಾರಿನ ಚಾಲಕ ಪಕ್ಕದ ಬಾಗಿಲಿಗೆ ಡಿಕ್ಕಿ ಹೊಡೆಯಿತು. ಆ ಸಮಯದಲ್ಲಿ ಚಾಲಕ ಕೈ ಹೊರ ಹಾಕಿ ಕುಳಿತಿದ್ದನು. ಅವನ ಮಾತಿನ ಪ್ರಕಾರ ಆ ಸಮಯದಲ್ಲಿ ಸರಿಯಾಗಿ ಯಾರೋ ಅವನ ಕೈಯನ್ನು ಒಳೆಕ್ಕೆಳೆದಂತಾಯಿತು ಹಾಗೂ ಆತನ ಕೈಗೆ ಯಾವುದೇ ರೀತಿಯ ಗಾಯವಾಗಲಿಲ್ಲ. ನಮ್ಮ ಕಾರಿಗೆ ಡಿಕ್ಕಿ ಹೊಡೆದ ಮಾರುತಿ ಕಾರು ಸುಮಾರು ನೂರು ಅಡಿ ದೂರ ಹೋಗಿ ಬಿದ್ದಿತ್ತು. ಆದರೆ, ನಮ್ಮಲ್ಲಿ ಯಾರಿಗೂ ಒಂದು ಗೀರುಗಾಯ ಕೂಡಾ ಆಗಲಿಲ್ಲ. ಯಾವ ಗಾಜಿನ ಮೇಲೆ ಅಕ್ಕಲಕೋಟ್ ಮಹಾರಾಜರ ಚಿತ್ರ ಹಚ್ಚಲಾಗಿತ್ತೋ ಆ ಗಾಜು ಒಡೆದು ನುಚ್ಚುನೂರಾಗಿದ್ದರೂ ಕೂಡಾ ಏನಾಶ್ಚರ್ಯ! ಫೋಟೋಗೆ ಮಾತ್ರ ಯಾವುದೇ ರೀತಿಯ ಹಾನಿಯುಂಟಾಗಿರಲಿಲ್ಲ. ಮಾರುತಿ ಕಾರಿನಲ್ಲಿ ಸವಾರರಾಗಿದ್ದ ನಾಲ್ಕು ಮಂದಿಯೂ ಕೂಡಾ ಮೂರ್ಛಿತರಾಗಿದ್ದರು. ಆದರೆ, ಆಶ್ಚರ್ಯವೆಂದರೆ ಅವರೆಲ್ಲರೂ ಸಯನ್ ಆಸ್ಪತ್ರೆಗೆ ತಲುಪುವಷ್ಟರಲ್ಲಿ ಎಚ್ಚರಗೊಂಡಿದ್ದರು. ಈ ರೀತಿ ಡಾ. ಅನಿರುದ್ಧ (ಬಾಪೂ)ರವರು ಕೇವಲ ನಮ್ಮನ್ನಷ್ಟೇ ಅಲ್ಲದೆ ನಮ್ಮ ಚಾಲಕನನ್ನು ಹಾಗೂ ಆ ಕಾರಿನಲ್ಲಿದ್ದವರನ್ನೂ ಕೂಡಾ ಆಪತ್ತಿನಿಂದ ಪಾರುಮಾಡಿದರು.

ಒಮ್ಮೆ ನಾನು ನನ್ನ ಪತ್ನಿ ಸ್ಮಿತಾ ಮತ್ತು ನನ್ನ ಕಿರಿಯ ಮಗ ಸೌಮಿತ್ರನೊಂದಿಗೆ ಕೊಲ್ಹಾಪುರದಲ್ಲಿರುವ ಶ್ರೀ ಅಂಬಾಬಾಯಿ (ಮಹಾಲಕ್ಷ್ಮೀ)ಯ ದರ್ಶನಕ್ಕೆ ಹೊರಟಿದ್ದೆವು. ಹೊರಡುವ ಮೊದಲು ಶ್ರೀ ಅನಿರುದ್ಧರ ಅಪ್ಪಣೆಯನ್ನು ಪಡೆದುಕೊಂಡೆವು. ಆಗ ಅವರು ನನಗೆ ತುಳಸಿಯ 5 ಎಸಳುಗಳನ್ನು (ಎಲೆಗಳನ್ನು) ಜೊತೆಯಲ್ಲಿರಿಸಿಕೊಳ್ಳಲು ಆದೇಶಿಸಿದ್ದರು ಹಾಗೂ ''ಸೌಮಿತ್ರನಿಗೆ ಪ್ರಯಾಣದಲ್ಲಿ ತುಂಬಾ ಕಷ್ಟವಾಗಬಹುದು. ಆದರೆ, ಭಯ ಪಡಬೇಕಾದ ಆವಶ್ಯಕತೆಯಿಲ್ಲ'' ಎಂದು ಹೇಳಿ ತುಳಸಿ ಪತ್ರಗಳ ಉಪಯೋಗವನ್ನು ತಿಳಿಸಿ ಹೇಳಿದರು. ನಾವು ಪ್ರಯಾಣ ಆರಂಭಿಸಿ ಕಾತ್ರಜ ಘಾಟಿ ಕ್ರಮಿಸಲು ಶುರುವಾದಾಗ ಒಮ್ಮೆಲೇ ಸೌಮಿತ್ರ ವಿಪರೀತ ವಾಂತಿ ಮಾಡತೊಡಗಿದನು ಹಾಗೂ ತುಂಬಾ ಸಪ್ಪಗಾದನು. ನಾನು ಸ್ವಯಂ ಒಬ್ಬ ಬಾಲರೋಗತಜ್ಞ (ಎಂ.ಡಿ.)ನಾಗಿದ್ದೆನು. ಸ್ವಲ್ಪ ಸಮಯದ ನಂತರ ಸೌಮಿತ್ರನ ಶ್ವಾಸೋಚ್ಛ್ವಾಸ ಇಳಿಮುಖವಾಗಿ ತೊಡಗಿತ್ತು, ಆಗ ನಮಗೆ ಡಾ. ಅನಿರುದ್ಧರ ಮಾತುಗಳು ನೆನಪಾಯಿತು ಹಾಗೂ ಅವರು ಹೇಳಿದಂತೆ ಒಂದು



ತುಳಸೀದಳವನ್ನು ಮಗುವಿನ ಬಾಯಲ್ಲಿ ಹಾಗೂ ಇನ್ನೊಂದನ್ನು ಸ್ವತಃ ನನ್ನ ಬಾಯಲ್ಲಿ ಇಟ್ಟುಕೊಂಡೆನು. ಸೌಮಿತ್ರನ ಶ್ವಾಸ ಎಷ್ಟೊಂದು ಇಳಿಮುಖವಾಗುತ್ತೆಂದರೆ ನಾನು ಅವನ ಎದೆಯ ಮೇಲೆ ಕೈಯಿಟ್ಟು ಕುಳಿತ್ತಿದ್ದೆನು. ಘಾಟ್ ಇಳಿಯುತ್ತಿದ್ದಂತೆ ಸೌಮಿತ್ರನ ಪರಿಸ್ಥಿತಿ ಸುಧಾರಿಸಿಕೊಂಡಿತು ಹಾಗೂ ಅವನು ಪೂರ್ಣ ಗುಣಮುಖನಾದನು. ಇದೆಂತಹಾ ಔಷಧಿ! ರೋಗ ಕಾಣಿಸಿಕೊಳ್ಳುವ ಒಂದು ದಿನದ ಮುಂಚೆಯೇ ರೋಗಕ್ಕೆ ಚಿಕಿತ್ಸೆ? ಇದೆಂತಹಾ ವೈದ್ಯಕೀಯ ಶಾಸ್ತ್ರ? ಹಾಗೂ ರೋಗಕ್ಕೆ ತತ್‍ಕ್ಷಣ ಗುಣಕಾರೀ ರೋಗ ವಿಧಾನ!

ಇಂದಿನವರೆಗೆ ನನಗೆ ದೊರಕಿದ ಡಾ. ಅನಿರುದ್ಧರ ಸ್ನೇಹ, ಪ್ರೇಮ, ಮಮತೆ ಮತ್ತು ಮಾರ್ಗದರ್ಶನವೇ ನನ್ನ ಎಲ್ಲಕ್ಕಿಂತ ದೊಡ್ಡ ಸಂಪತ್ತು. ಕೊನೆಯಲ್ಲಿ ನಾನು ಒಂದೇ ಪ್ರಾರ್ಥನೆ ಮಾಡ ಬಯಸುವೆ-

*‘‘ಶ್ರೀ ಅನಿರುದ್ಧ ವಿಜಯತೇ’’*

ANUBHAVS

HARI OM

© Copyright 2010, Manasamarthyadata.com

manasamarthyadata.com